ಬೆಂಗಳೂರು ನಗರದಲ್ಲಿ ಭಾರತೀಯ ದಂಡ ಸಂಹಿತೆಯ ಪ್ರಕಾರ ಅಪರಾಧಗಳು

೯೨. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಿನಾಂಕ ೧–೧–೮೫ ರಿಂದ ಇದುವರೆವಿಗೆ, ಬೆಂಗಳೂರು ನಗರದಲ್ಲಿ ಸ್ತ್ರೀಯರ ಮತ್ತು ಮನುಷ್ಯರಿಗೆ ಸಂಬಂಧಪಟ್ಟಂತೆ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಜರುಗಿರುವ ಅಪರಾಧಗಳ ಸಂಖ್ಯೆ ಎಷ್ಟು ?

ಆ) ಈ ಅಂಕಿಗಳನ್ನು ೧೯೮೨ನೇ ವರ್ಷದ ಅಂಕಿಗಳಿಗೆ ಹೋಲಿಸಿದರೆ ಇವು ಜಾಸ್ತಿಯೇ ಅಥವಾ ಕಡಿಮೆಯೇ ?

ಇ) ಬೆಂಗಳೂರು ನಗರದಲ್ಲಿ ಇಂತಹ ಅಪರಾಧಗಳನ್ನು ತಡೆಗಟ್ಟಲು ಏನಾದರೂ ನಿವಾರಕ ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಈ) ಬೆಂಗಳೂರು ನಗರದಲ್ಲಿ ೩ ವರ್ಷಗಳಿಂದಲೂ ಮೇಲ್ಪಟ್ಟು ಕರ್ತವ್ಯ ನಿರ್ವಹಿಸುತ್ತಿರುವವರ ಪೋಲೀಸ್ ಅಧಿಕಾರಿಗಳ ಸಂಖ್ಯೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ೧೯೮೫ ರಲ್ಲಿ ಒಟ್ಟು ೧೯,೯೫೧ ಅಪರಾಧಗಳು ನಡೆದಿವೆ.

ಆ) ೧೯೮೨ನೆಯ ಅಂಕಿಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ.

ಇ) ಬೆಂಗಳೂರು ನಗರದಲ್ಲಿ ಆಗುತ್ತಿರುವ ಅಪರಾಧಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.—

೧) ರಾತ್ರಿ ಗಸ್ತನ್ನು ಬಲಗೊಳಿಸಿ ಹಾಗೂ ಆರಕ್ಷರ ಉಪ ಆಯುಕ್ತರು ಪ್ರತಿ ದಿನ ಒಬ್ಬರು ರಾತ್ರಿ ಗಸ್ತಿನ ಮೇಲ್ವಿಚಾರಣೆ ವಹಿಸಿಕೊಂಡಿರುತ್ತಾರೆ.

೨) ಅತ್ಯಧಿಕ ಸಂಖ್ಯೆಯ ಆರಕ್ಷಕ ಸಹಾಯಕ ಆಯುಕ್ತರುಗಳು, ಆರಕ್ಷಕ ನಿರೀಕ್ಷಕರುಗಳು ರಾತ್ರಿಯ ಗಸ್ತನ್ನು ನಿರ್ವಹಿಸಿರುತ್ತಾರೆ,

೩) ವಿಶೇಷವಾಗಿ ಸಜ್ಜುಗೊಳಿಸಿರುವ ಆರಕ್ಷಕ ವಾಹನಗಳನ್ನು ಬೆಂಗಳೂರು ನಗರದ ಗಡಿಯಲ್ಲಿ ಸಂಚಾರ ಮಾಡಲು ವ್ಯವಸ್ಥೆಯನ್ನು ಮಾಡಲಾಗಿದೆ.

೪) ಸಶಸ್ತ್ರ ಮೀಸಲು ಪಡೆಯನ್ನು ಯಾವಾಗ ಎಲ್ಲೆಲ್ಲಿ ಅಪರಾಧಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿರುತ್ತವೊ ಅಂತಹ ಸ್ಥಳಗಳಲ್ಲಿ ಇವರನ್ನು ಕರ್ತವ್ಯ ನಿರ್ವಹಿಸಲು ನೇಮಿಸಲಾಗಿದೆ.

೫) ಅನುಮಾನಸ್ಪದವಾದ ಅಸಾಮಿಗಳನ್ನು ಬಂಧಿಸಿ ಅವರ ವಿರುದ್ಧ ಸೆಕ್ಯೂರಿಟಿ ಆಕ್ಟ್ ಪ್ರಕಾರ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ.

೬) ಕೇಡಿಗಳ ಮೇಲೆ ನಿಗಾವಹಿಸಲಾಗುತ್ತಿದೆ.

ಈ) ೩೨೭.

ವಿವರ ಕೆಳಕಂಡಂತಿದೆ.—

ಅಧಿಕಾರಿಗಳು	ಸಂಖ್ಯೆ
ಆರಕ್ಷಕ ಉಪ ಆಯುಕ್ತರು	೧
ಆರಕ್ಷಕ ಸಹಾಯಕ ಆಯುಕ್ತರು	೩
ಆರಕ್ಷಕ ನಿರೀಕ್ಷಕರು	೧೮
ಆರಕ್ಷಕ ಉಪ ನಿರೀಕ್ಷಕರು	೩೦೫

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ೧-೧-೮೫ ರಿಂದ ಇದುವರೆಗೆ ಬೆಂಗಳೂರು ನಗರದಲ್ಲಿ ಸ್ವತ್ತಿಗಳ ಮಂತ್ತು ಮನುಷ್ಯರಿಗೆ ಸಂಬಂಧಪಟ್ಟಂತೆ ಭಾರತೀಯ ದಂಡಸಂಹಿತೆಯ ಅಡಿಯಲ್ಲಿ ಜರುಗಿರುವ ಅಪರಾಧಗಳ ಸಂಖ್ಯೆ ಎಷ್ಟು ? ಎಂದು ನಾನು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ೧೯,೮೫೧ ಅಪರಾಧಗಳು ನಡೆದಿವೆ ಎಂದು ಹೇಳಿದ್ದಾರೆ. ಇದು ಅವರ ದೃಷ್ಟಿಯಲ್ಲಿ ಕಡಿಮೆಯಂತೆ.....

ಶ್ರೀ ಬಿ. ರಾಚಯ್ಯ.— ೧೯೮೫ನೇ ಇಸವಿಯಲ್ಲಿ ನಡೆದಿರುವುದಕ್ಕೆ ಹೋಲಿಸಿದರೆ ಇದು ಕಡಿಮೆ.

ಶ್ರೀ ಬಿ. ಬಸವಲಿಂಗಪ್ಪ.— ೮೫ ನೇ ಇಸವಿಯಲ್ಲಿ ೧೯ ಸಾವಿರ ಚಿಲ್ಲರೆ ಅಪರಾಧಗಳು ಕಡಿಮೆ ಎನ್ನುವುದಾದರೆ ಇದು ೧ ಲಕ್ಷ ಆಗಬೇಕಾಗಿತ್ತೇ ? ಈ ಬೆಂಗಳೂರು ನಗರ ಒಂದರಲ್ಲೇ ಇಷ್ಟೊಂದು ಅಪರಾಧಗಳು ಆಗುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಾ? Out of 19,951 how many of them are grievous and fatal offences ? ಇದು ಕಡಿಮೆ ಸಂಖ್ಯೆ ಅಪರಾಧಗಳು ಎಂದು ನಿಮಗೆ ಏನಾದರೂ ಸಮಾಧಾನವೆ ? ಇದು ಯಾವ ರೀತಿ ಕಡಿಮೆ ಸಂಖ್ಯೆ ಎಂದು ತಾವು ಸಮಾಧಾನ ಪಟ್ಟುಕೊಳ್ಳುತ್ತಿದ್ದೀರಿ ? ಇನ್ನು ಈ ಅಪರಾಧಗಳನ್ನು ಕಡಿಮೆ ಮಾಡುವುದಕ್ಕೆ ಹಲವಾರು ಕ್ರಮ ಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಈ ಕ್ರಮವನ್ನು ತಾವು ಯಾವಾಗ ತೆಗೆದುಕೊಂಡಿರಿ ? ಮಂತ್ತು ಯಾವಾಗ ಅದು ಜಾರಿಗೆ ಬಂತು ? ಮತ್ತು ಅದರಿಂದ ಆಗಿರತಕ್ಕ ಪ್ರತಿಫಲ ಏನು? ಎಂಬುದನ್ನು ತಿಳಿಸಬೇಕು.

ಇನ್ನು ೩ ವರ್ಷಗಳಿಗಿಂತ ಹೆಚ್ಚಿನ ಕಾಲದವರೆಗೆ ಒಂದೇ ಜಾಗದಲ್ಲಿ ಇರತಕ್ಕ ಅಧಿಕಾರಿಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ೩೨೭ ಜನ ಎಂದು ತಾವು ಹೇಳಿದ್ದೀರಿ. ಇಷ್ಟು ಜನರೂ ಇದೇ ಬೆಂಗಳೂರಿನಲ್ಲಿ ಖಾಯಂ ಆಗಿ ಕಳೆದ ೩ ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಇದ್ದಾರೆ. ನಿಮ್ಮ ಕಾನೂನು ಪ್ರಕಾರ ಎಷ್ಟು ವರ್ಷಕ್ಕೊಮ್ಮೆ ಸರ್ಕಾರಿ ನೌಕರರನ್ನು ವರ್ಗ ಮಾಡಬೇಕೆಂದಿದೆ ? ನಿಮ್ಮ ಪೋಲೀಸ್ ಇಲಾಖೆಯಲ್ಲಿ ೩೨೭ ಜನ ೩ ವರ್ಷಕ್ಕಿಂತ ಹೆಚ್ಚು ಯಾರು ಖಾಯಂ ಆಗಿ ಇಲ್ಲೇ ಇದ್ದಾರೆ ಇವರು ಅತಿ ಬುದ್ಧಿವಂತರು ಎಂದು ತಾವು ಇಟ್ಟುಕೊಂಡಿದ್ದೀರಾ ? ಇವರಿಗಿಂತ ಬುದ್ಧಿವಂತರು ನಮ್ಮ ಕರ್ನಾಟಕ ರಾಜ್ಯದಲ್ಲಿ ಬೇರೆ ಯಾರೂ ಇಲ್ಲವೆ !

ಶ್ರೀ ಬಿ. ರಾಚಯ್ಯ.— ೩ ವರ್ಷಕ್ಕಿಂತ ಹೆಚ್ಚು ಕಾಲದಿಂದ ಇಲ್ಲೇ ಇರುವವರು ಎಷ್ಟು ಜನ ರಿದ್ದಾರೆಂದು ತಾವು ಕೇಳಿರುವ ಪ್ರಶ್ನೆಗೆ ನಾನು ವಿವರವನ್ನು ಕೊಟ್ಟಿದ್ದೇನೆ. ಆದರೆ ಇವರೇ ಬಹಳ ಬುದ್ಧಿವಂತರು, ಇವರಿಗಿಂತ ಹೆಚ್ಚಿನ ಬುದ್ಧಿವಂತರು ಯಾರೂ ಇಲ್ಲವೆಂದು ನಾನು ಹೇಳುವುದಿಲ್ಲ. ಇವರಿಗಿಂತಲೂ ಬುದ್ಧಿವಂತರು ಇನ್ನೂ ಇದ್ದಾರೆ. ಇವರನ್ನು ಇಷ್ಟು ವರ್ಷ ಕಾಲ ಇಟ್ಟುಕೊಂಡಿರಲು ಕಾರಣ ಎಂದರೆ ಯಾರೇ ಒಬ್ಬ ಅಧಿಕಾರಿಯನ್ನು ೩ ವರ್ಷವಾದ ಕೂಡಲೇ ವರ್ಗ ಮಾಡಿದರೆ ಬರತಕ್ಕ ಹೊಸಬರು ಸ್ಥಳೀಯ ವಿಷಯಗಳನ್ನು ಅಮೂಲಾಗ್ರವಾಗಿ ತಿಳಿದುಕೊಂಡು ಕೆಲಸ ಮಾಡಲು ಸಾಧ್ಯ ವಾಗುವುದಿಲ್ಲ. ಈ ಒಂದು ದೃಷ್ಟಿಯಿಂದ ಹಳಬರು ಸ್ಥಳೀಯ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡು ಕೆಲಸ ಮಾಡಲು ಅನುಕೂಲವಾಗುತ್ತದೆಂದು ಈ ರೀತಿ ಮಾಡಿದ್ದೇವೆ. ಈ ದಿವಸ ತಾವು ಏನು ಪ್ರಶ್ನೆ ಯನ್ನು ಕೇಳಿದ್ದೀರಿ ಇದನ್ನು ಗಮನದಲ್ಲಿ ಇಟ್ಟು ಕೊಂಡು ೩ ವರ್ಷಗಳಿಗಿಂತ ಹೆಚ್ಚು ಕಾಲದಿಂದ ಯಾರ್ಯಾರು ಅಧಿಕಾರಿಗಳು ಒಂದೇ ಕಡೆ ಇದ್ದಾರೆ ಅವರನ್ನು ಅಲ್ಲಿಂದ ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಸ್ವಾಮಿ, ನನ್ನ ಕ್ಷೇತ್ರದಲ್ಲಿ ನಿನ್ನೆಯ ದಿವಸ ಒಂದು ಮರ್ಡರ್ ಆಗಿದೆ ಕಳೆದ ಒಂದು ತಿಂಗಳಿಂದ ಇಂಥ ಪ್ರಕರಣಗಳು ನಡೆಯುತ್ತಿದ್ದರೂ ತಮ್ಮ ಇಲಾಖೆಯವರು ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಿಲ್ಲವೆ ?

ಶ್ರೀ ಬಿ. ರಾಚಯ್ಯ.— ದರೋಡೆಗಳು ಈ ರೀತಿಯಾಗಿ ನಡೆಯುತ್ತಿದೆ. ಇದನ್ನು ತಡೆಗಟ್ಟಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇದು ನಿನ್ನೆ ನಡೆದಿರತಕ್ಕಂಥ ಪ್ರಕರಣವಾಗಿರುತ್ತದೆ. ಇಲ್ಲಿ ಮರ್ಡರ್ ಏನೂ ಆಗಿಲ್ಲ. ಮನೆಯಲ್ಲಿ ಮಲಗಿರತಕ್ಕಂಥ ಜನರನ್ನು ಎಚ್ಚರಿಸಿ ಅವರಿಂದ ಬೀಗದ ಕೈಯನ್ನು ಪಡೆದು ಅವರಲ್ಲಿರತಕ್ಕಂಥ ವಸ್ತುಗಳನ್ನು ದೋಚಿಕೊಂಡು ಹೋಗಿರುತ್ತಾರೆ ಬಹುಶಃ ಈ ದರೋಡೆ ನಡೆದಿರತಕ್ಕಂಥ ಮನೆ ಯಲಹಂಕದಲ್ಲಿ ಬಹಳ ದೂರದಲ್ಲಿರತಕ್ಕಂಥ ಒಂಟಿ ಮನೆಯಾಗಿದು ಬಹಳ ಸಣ್ಣ ಮನೆಯಾಗಿದ್ದರೂ ಬಹಳವಾಗಿ ಹಣ ಇರಬಹುದೆಂದು ತಿಳಿದು ಈ ರೀತಿಯಾದ ದರೋಡೆ

ನಡೆದಿರುತ್ತದೆ. ದರೋಡೆ ನಡೆದಿದ್ದರೂ ಹಾಣಿ ಹಾನಿ ಯಾವುದೂ ಆಗಿಲ್ಲ. ಆದ್ದರಿಂದ ಆ ವಿಷಯಾದಲ್ಲಿ ಎಲ್ಲ ವಿಧವಾದ ಬಂದೋಬಸ್ತು ಮಾಡಿ ದರೋಡೆ ಮಾಡಿದವರನ್ನು ಹಿಡಿಯತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಬೆಂಗಳೂರು ಸಿಟಿಯಲ್ಲಿ ಇಂಥ ಅಪರಾಧಗಳು ಸಾವಿರಾರು ಆಗಿದ್ದರೂ ಅವುಗಳನ್ನು ಪೋಲೀಸ್‌ನವರಿಂದ ಹುಡುಕಲಿಕ್ಕೆ ಆಗಲಿಲ್ಲ ಮತ್ತು ತಡೆಗಟ್ಟಲಿಕ್ಕೂ ಆಗಲಿಲ್ಲ. ಆದ್ದರಿಂದ ಅವರಾಗಿಯೇ ಬಂದು ಸರಂಡರ್ ಆಗಿರತಕ್ಕಂಥವರನ್ನು ಹಿಡಿದಿರತಕ್ಕಂಥದ್ದು ಮಾಡಿರುತ್ತೀರಿ. ಕೊಲೆಗಳು ಆಗುತ್ತಿದೆ ಎಂದು ಹೇಳಿದರೆ, ಕೊಲೆಗಳು ಆಗುತ್ತದೆ ಅದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ ಎಂದು ಹೇಳುತ್ತೀರಿ, ಡಕಾಯಿತಿಗಳು ನಡೆಯುತ್ತಿದೆ ಎಂದರೆ ಅದಕ್ಕೆ ಏನು ಮಾಡುವುದು ಎಂದು ಹೇಳುತ್ತೀರಿ. ೧೯ ಸಾವಿರ, ೨೦ ಸಾವಿರ ಅಪರಾಧಗಳು ನಡೆದಿರುತ್ತವೆ ಎಂದರೆ ಇದು ಕಡಿಮೆಯಾಗದೆ ಜಾಸ್ತಿಯಾಗಬೇಕೆಂದು ಹೇಳುತ್ತೀರಾ ?

(ಮಂತ್ರಿಗಳಿಂದ ಉತ್ತರವಿಲ್ಲ)

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ನಾನು ಕೇಳಿದ ಪ್ರಶ್ನೆಯೇ ಬೇರೆ. ಆದರೆ ಉತ್ತರದಲ್ಲಿ ಲೋಕಾಯುಕ್ತದ ಬಗ್ಗೆ ಮಾನ್ಯ ಗೃಹ ಸಚಿವರು ಸ್ಟೇಟ್‌ಮೆಂಟ್ ಮಾಡಿರತಕ್ಕಂಥದ್ದು ಎಲ್ಲಾ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ. ಹಿಂದಿನ ಮತ್ತು ಇಂದಿನ ಎಲ್ಲಾ ಮಂತ್ರಿಗಳ ಆಸ್ತಿಪಾಸ್ತಿಯನ್ನು ತನಿಖೆ ಮಾಡಬೇಕಾಗಿದೆ, ಆ ಬಗ್ಗೆ ಯೋಗ್ಯ ವ್ಯವಸ್ಥೆಯನ್ನು ಮಾಡುತ್ತಿದ್ದೇವೆಂದು ಹೇಳಿದ್ದರೆ ಶಹಬಾಸ್‌ಗಿರಿಯನ್ನು ನಾವು ತಮಗೆ ಕೊಡುತ್ತಿದ್ದೆವು. ಮತ್ತೆ ಪತ್ರಿಕೆಗಳಲ್ಲಿ ಬರೆದಿರುವುದೂ ಕೂಡ ಬಹಳ ಅತ್ಯುತ್ಪ್ರವಾದ ಕೆಲಸವೇ ಆಗಿರುತ್ತದೆ. ಅನೇಕ ಪತ್ರಿಕೆಗಳವರು ಇದನ್ನು ಪ್ರಶಂಸೆ ಕೂಡ ಮಾಡಿದ್ದಾರೆ. ಹಿಂದಿನ ಮಂತ್ರಿಗಳಿಗೂ ಲೋಕಾಯುಕ್ತಕ್ಕೂ ಯಾವ ಸಂಬಂಧವಿಲ್ಲ. ಆದರೆ ಇವೊತ್ತಿಗೂ ಸಹಿತ ನಿಮ್ಮ ಮಂತ್ರಿಗಳು, ಎಂ.ಎಲ್.ಎ.ಗಳು, ಪಾರ್ಟಿ ಮಂತ್ರಿಗಳು ಅವರವರ ಆಸ್ತಿಪಾಸ್ತಿಗಳ ಬಗ್ಗೆ ವಿವರಗಳನ್ನು ನೀವು ಕೇಳಿದ್ದೀರಾ ? ಮತ್ತು ಅವರುಗಳು ವಿವರಗಳನ್ನು ಕೊಟ್ಟಿರುತ್ತಾರೆಯೇ?

ಶ್ರೀ ಬಿ. ರಾಚಯ್ಯ.—ಮಾನ್ಯ ಮುಖ್ಯಮಂತ್ರಿಗಳು, ಎಲ್ಲಾ ಮಂತ್ರಿಗಳು, ಶಾಸಕರು ಕೂಡ ಸೇರಿದಂತೆ ಎಲ್ಲರೂ ತಮ್ಮ ತಮ್ಮ ಆಸ್ತಿ ಮತ್ತು ಹಣದ ಬಗ್ಗೆ ವಿವರಗಳನ್ನು ಲೋಕಾಯುಕ್ತಕ್ಕೆ ಕೊಡಬೇಕೆಂದು ಹೇಳಿದ್ದೇವೆ. ಅದರ ಪ್ರಕಾರ ಎಲ್ಲರೂ ಕೂಡ ಅವರವರ ಆಸ್ತಿಯ ಬಗ್ಗೆ ವಿವರಣೆಗಳನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಈಗಿನ ಮಂತ್ರಿಗಳೂ ಎಲ್ಲರೂ ಕೂಡ ಅವರವರ ಆಸ್ತಿಗಳ ವಿವರಗಳನ್ನು ಕೊಡಬೇಕಾಗುತ್ತದೆ. ಮತ್ತೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಲೋಕಾಯುಕ್ತ ಕಾಪಿಯನ್ನು ಎಲ್ಲರಿಗೂ ಕಳುಹಿಸಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಲೇಜಿಸ್ಲೆಟರ್ ಸೆಕ್ರೆಟೇರಿಯೇಟ್‌ನವರು ಲೋಕಾಯುಕ್ತ ಕಾಪಿಯನ್ನು ಎಲ್ಲರಿಗೂ ಹಂಚತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗಿರುತ್ತದೆ. ಅದನ್ನು ಹಂಚಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

(ಈ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಮುಖ್ಯಮಂತ್ರಿಗಳಿಗೆ ಧಿಕ್ಕಾರ, ರಾಮಕೃಷ್ಣ ಹೆಗಡೆಯವರಿಗೆ ಧಿಕ್ಕಾರ ಗೃಹ ಮಂತ್ರಿಗಳಿಗೆ ಧಿಕ್ಕಾರವೆಂದು ಕೂಗುತ್ತ ಕರಪತ್ರಗಳನ್ನು ಯಾರೋ ಕೆಲವರು ಎಸೆಯುವರು)

ಅಧ್ಯಕ್ಷರು.—ಮೇಲುಗಡೆ ಕುಳಿತಿರತಕ್ಕಂಥ ಪ್ರೇಕ್ಷಕರು ಯಾರೂ ಈ ರೀತಿಯಾಗಿ ಗಲಾಟೆಯನ್ನು ಮಾಡಬಾರದು. ಗಲಾಟೆಯನ್ನು ಮಾಡಿದರೆ ಕಾಯಿದೆ ಪ್ರಕಾರ ಅವರಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಈ ಲೋಕಾಯುಕ್ತ ಕಾಪಿಗಳು ಸರ್ಕಾರಿ ಪುಸ್ತಕಾಲಯದಲ್ಲೂ ಕೂಡ ದೊರೆಯುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಲೋಕಾಯುಕ್ತ ಕಾಯಿದೆಯ ಪ್ರತಿಗಳನ್ನು ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆ. ಮಾನ್ಯ ಕೆ.ಎಚ್. ಪಾಟೀಲ್‌ರವರು

ಮಾತನಾಡಿತ್ತಾ, ಯಾವ ಯಾವ ಮಂತ್ರಿಗಳು ಆಸ್ತಿಪಾಸ್ತಿ ವಿವರಗಳನ್ನು ಕೊಟ್ಟಿದ್ದಾರೆ, ಎಂದು ಕೇಳಿದ್ದಾರೆ. ಎಲ್ಲಾ ಮಂತ್ರಿಗಳಿಗೂ ಆಸ್ತಿಪಾಸ್ತಿಯ ವಿವರಗಳನ್ನು ಕೇಳಿದ್ದೇವೆ, ವಿವರಗಳು ಬಂದಿರುತ್ತವೆ. ಕಳೆದ ಏರಡೂ ಏರಡೂವರೆ ವರ್ಷಗಳ ಜನತಾ ಪಕ್ಷದ ಆಡಳಿತದಲ್ಲಿ ಬಂದಿರತಕ್ಕಂಥ ಎಲ್ಲಾ ಮಂತ್ರಿಗಳ ಆಸ್ತಿಪಾಸ್ತಿಗಳ ವಿವರಗಳನ್ನು ಕೇಳಿರುತ್ತೇವೆ. ಅನೇಕ ಜನರು ಕೊಟ್ಟಿರುತ್ತಾರೆ. ಅವರ ಹೆಸರುಗಳು ಈ ರೀತಿ ಇರುತ್ತದೆ. ಶ್ರೀಯುತರುಗಳಾದ ೧) ಅಬ್ದುಲ್ ನಜೀರ್ ಸಾಬ್, ೨) ಎಚ್. ಡಿ. ದೇವೇಗೌಡರು, ೩) ಎಸ್. ಆರ್. ಬೊಮ್ಮಾಯಿ ೪) ಆರ್. ಎಲ್. ಜಾಲಪ್ಪ ೫) ಎ. ಲಕ್ಷ್ಮೀಸಾಗರ್ ೬) ಜೀವರಾಜ ಆಳ್ವ ೭) ಪಿ. ಜಿ. ಆರ್. ಸಿಂಧ್ಯ ೮) ಬಿ. ರಾಚಯ್ಯ, ರಮೇಶ್ ಜಿಗಜಿಣಗಿ ೯) ಜೀವಿಜಯ ೧೦) ಜೆ. ಎಚ್. ಪಟೇಲ್ ೧೧) ಬಿ. ಎಲ್. ಗೌಡ ೧೨) ಆರ್. ಎಲ್. ಲಕ್ಷ್ಮೀಪತಿ ೧೩) ರೇವಣ್ಣ ೧೪). ಶ್ರೀಮತಿ ಚಂದ್ರಪ್ರಭಾ ಅರಸ್ ಮತ್ತು ಎಂ. ಸಿ. ವೀರುಮಾಳ್ ಇವರಿಷ್ಟು ಜನರು ಈಗಾಗಲೇ ವಿವರಗಳನ್ನು ಕೊಟ್ಟಿರುತ್ತಾರೆ.

ಶ್ರೀ ಕೆ. ಎಚ್. ಪಾಟೀಲ್.—ಎಷ್ಟೆಷ್ಟು ಆಸ್ತಿ ಇರುತ್ತದೆ, ಅದರ ಬಗ್ಗೆ ವಿವರಗಳನ್ನು ಕೊಟ್ಟಿರುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅದೆಲ್ಲ ಕಾನ್‌ಫಿಡೆನ್‌ಷಿಯಲ್ ನೇಚರ್ ಇರುತ್ತದೆ. ಹಿಂದಿನ ಮಂತ್ರಿಗಳ ಆಸ್ತಿಯ ವಿವರಗಳನ್ನು ಕೇಳುವ ಅಧಿಕಾರ ನಮಗೆ ಇಲ್ಲ. ನಮ್ಮ ಪಕ್ಷದ ಮಂತ್ರಿಗಳ ಅವರ ಆಸ್ತಿ ಪಾಸ್ತಿಗಳ ಬಗ್ಗೆ ವಿವರಗಳನ್ನು ನಾವು ಕೇಳಿದ್ದೇವೆ. ಅಗತ್ಯವಾಗಿ ಲೋಕಾಯುಕ್ತ ರಚನೆಯಾದ ಆಮೇಲೆ ಮೂರೂ ತಿಂಗಳೊಳಗೆ ವಿವರಗಳನ್ನು ಕೊಡಬೇಕೆಂದು ಹೇಳಿರುತ್ತೇವೆ. ಇದರಲ್ಲಿ ಪಬ್ಲಿಕ್ ಸರ್ವೆಂಟ್ಸ್, ಮಿನಿಸ್ಟರ್ಸ್ ಮತ್ತು ಮೆಂಬರ್ಸ್ ಎಲ್ಲರೂ ಬರುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಹಿಂದೆ ಶ್ರೀ ಡಿ. ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರ ಮಂತ್ರಿಮಂಡಲದಲ್ಲಿದ್ದ ನಾವೆಲ್ಲರೂ ಕೂಡ ಆಸ್ತಿಪಾಸ್ತಿಯ ಬಗ್ಗೆ ವಿವರಗಳನ್ನು ಕೊಟ್ಟಿರುತ್ತೇವೆ. ಈ ಸದನದಲ್ಲಿ ಆ ರೆಕಾರ್ಡ್ ಇದೆಲ್ಲಾ ಹೊಸದೇನೂ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕೊಟ್ಟಿದ್ದೀರಿತಾನೆ. ಒಳ್ಳೆಯದು.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಮಂತ್ರಿಗಳಾಗಿದ್ದವರೂ ಕೂಡ ಕೊಟ್ಟಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಸಾಮಾನ್ಯವಾಗಿ ಮೂವತ್ತು ವರ್ಷಗಳಿಂದಲೂ ಪ್ರಸ್ತಾಪವಾಗುತ್ತಲೇ ಇದೆ, ಚರ್ಚೆ ನಡೆಯುತ್ತಲೇ ಇದೆ. ಇಲ್ಲಿಯವರೆಗೂ ಈ ಕಾಯಿದೆ ಮೇರೆಗೆ ಕಡ್ಡಾಯವಾಗಿ ಆಸ್ತಿಪಾಸ್ತಿ ವಿವರಗಳನ್ನು ಕೊಡತಕ್ಕಂಥ ಸ್ಥಿತಿ ಇರಲಿಲ್ಲ. ನಮ್ಮ ಪಕ್ಷದ ದೃಷ್ಟಿಯಿಂದ ವಿವರಗಳನ್ನು ಕೊಡಬೇಕೆಂದು ಕೇಳಿದ್ದೇವೆ. ಪ್ರತಿಯೊಬ್ಬರೂ ಆಸ್ತಿಪಾಸ್ತಿಯ ವಿವರಗಳನ್ನು ಕೊಡಲೇ ಬೇಕಾಗುತ್ತದೆ. ಇಲ್ಲಿಯವರೆಗೂ ಲೋಕಾಯುಕ್ತದ ಬಗ್ಗೆ ಏನು ಚರ್ಚೆ ಮಾಡುತ್ತಿದ್ದೆವು, ಅದನ್ನು ಈಗ ಜಾರಿಗೆ ತಂದಿದ್ದೇವೆ.

ಅಧ್ಯಕ್ಷರು.—ಮುಂದೂಡಲ್ಪಟ್ಟ ಪ್ರಶ್ನೆ ೧೬೪ (೯೦) ಮಾನ್ಯ ಆರೋಗ್ಯ ಸಚಿವರು ಉತ್ತರಿಸ ಬೇಕು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಇದು ಲಿಸ್ಟ್‌ನಲ್ಲಿ ಇಲ್ಲ. ಕಾಲಾವಕಾಶಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಲಿಸ್ಟ್‌ನಲ್ಲಿ ಬಂದಿರುತ್ತದೆ. ನಾಳೆಯ ದಿವಸದ ಅಜೆಂಡಾದಲ್ಲಿ ಏನೇನು ಬರುತ್ತದ ಎಂಬುದನ್ನು ತಾವು ಮುಂಚಿತವಾಗಿಯೇ ನೋಡಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಈಗ ಶ್ರೀ ಕೆ. ಕಾಶಾಲರವರ ಅಲ್ಪಕಾಲಾವಧಿ ಪ್ರಶ್ನೆ ಸಂಖ್ಯೆ ೪(೨೨) ಮಾನ್ಯ ಆರೋಗ್ಯ ಮಂತ್ರಿಗಳು ತಾವೇ ಉತ್ತರಿಸಬೇಕು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಇದು ರಾತ್ರಿ ಮೂರು ಗಂಟೆಯ ಸಮಯದಲ್ಲಿ ಬಂದಿರತಕ್ಕಂಥದ್ದಾಗಿರುತ್ತದೆ. ಇದಕ್ಕೂ ಕೂಡ ಕಾಲಾವಕಾಶ ಬೇಕಾಗಿರುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಮುಂದಕ್ಕೆ ಹಾಕಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಈ ಏರಡು ಪ್ರಶ್ನೆಗಳನ್ನು ಮುಂದಕ್ಕೆ ಹಾಕಲಾಗಿದೆ.